15ನೇ ಮು ಉ SL.NO31 ದಿ:- 12-03-26

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಆರತಿ ಕೃಷ್ಣ ಇವರ ಶೂನ್ಯವೇಳೆಯ ಪ್ರಶ್ನೆಗೆ ಸರ್ಕಾರದ ಉತ್ತರ**

**ಪ್ರಶ್ನೆ:-**

ನಿರಂತರವಾಗಿ ಕಳೆದ ಹದಿನೈದು ದಿನಗಳಿಂದ ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವಂತೆ, ಮಧ್ಯಪ್ರಾಚ್ಯ ದೇಶಗಳಲ್ಲಿ ಯುದ್ಧಭೀತಿ ಉಲ್ಬಣವಾಗುತ್ತಿದ್ದು, ಇದರಿಂದಾಗಿ ಪ್ರಪಂಚ ದಾದ್ಯಂತ ಎಲ್ಲಾ ದೇಶಗಳಿಗೂ ಒಂದಲ್ಲಾ ಒಂದು ರೀತಿಯಲ್ಲಿ ಸಮಸ್ಯೆಯಾಗುತ್ತಿ ರುವುದು ಕಾಣಬಹುದಾಗಿದೆ.

ಮಧ್ಯಪ್ರಾಚ್ಯ ದೇಶಗಳಲ್ಲಿ ಉದ್ಯೋಗನಿರತ ಅನಿವಾಸಿ ಕನ್ನಡಿಗರು ಯುದ್ಧಭೀತಿಯಿಂದ ಉದ್ಯೋಗ ಕಳೆದುಕೊಳ್ಳುವ ಮತ್ತು ಅಸುರಕ್ಷತೆ ಹಿನ್ನಲೆಯಲ್ಲಿ ರಾಜ್ಯಕ್ಕೆ ಹಿಂತಿರುಗಲು ಸೂಕ್ತ ವ್ಯವಸ್ಥೆ ಇಲ್ಲದೆ ಅತಂತ್ರ ಪರಿಸ್ಥಿತಿಯಲ್ಲಿರುವುದರಿಂದ, ಇವರುಗಳ ಕುಟುಂಬ ವರ್ಗದವರು ಅತ್ಯಂತ ಆತಂಕ ಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ಇಂತಹ ಸ್ಥಿತಿಯಲ್ಲಿ ಅನಿವಾಸಿ ಕನ್ನಡಿಗರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದಲ್ಲಿ ಇರುವ ವ್ಯವಸ್ಥೆ ಎಂದರೆ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ. ಈ ಸಮಿತಿಯು ವಿದೇಶಗಳಲ್ಲಿರುವ ಭಾರತೀಯ ರಾಯಭಾರಿಗಳ ಕಛೇರಿಯನ್ನು ಸಂಪರ್ಕಿಸಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಣೆ ಮಾಡಲು ಅನುವಾಗು ವಂತೆ, ಈ ಸಮಿತಿಯನ್ನು ಸಚಿವಾಲಯವನ್ನಾಗಿ ಮಾರ್ಪಡಿಸಿ ಬಲವರ್ಧನೆ ಮಾಡುವುದು ತುಂಬಾ ಅನಿವಾರ್ಯವಾಗಿದೆ.

ಕನ್ನಡಿಗ ಅನಿವಾಸಿ ಭಾರತೀಯರು, ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ರಚನೆಯ ಅವಿಭಾಜ್ಯ ಆಧಾರಸ್ತಂಭ ವಾಗಿದ್ದಾರೆ ಮತ್ತು ಮುಂದೆಯೂ ಇರುತ್ತಾರೆ. ಅವರ ಹಣ ರವಾನೆ, ಲೋಕೋಪಕಾರಿ ಚಟುವಟಿಕೆಗಳು, ಕೌಶಲ್ಯ ಕೊಡುಗೆಗಳು ಮತ್ತು ಜಾಗತಿಕ ಖ್ಯಾತಿಯ ಬೆಂಬಲವು ರಾಜ್ಯದ ಅಭಿವೃದ್ಧಿಯಲ್ಲಿ ಮೌನವಾದರೂ ಗಣನೀಯ ಪಾತ್ರವನ್ನು ವಹಿಸುತ್ತಿದೆ. ಆದ್ದರಿಂದ, ಮೇಲಿನ ಎಲ್ಲಾ ಸಕಾರಣಗಳನ್ನು ಗಮನದಲ್ಲಿಟ್ಟುಕೊಂಡು ಅನಿವಾಸಿ ಕನ್ನಡಿಗರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಅನಿವಾಸಿ ಭಾರತೀಯರ ಸಚಿವಾಲಯ ಸ್ಥಾಪನೆ ಮಾಡುವಂತೆ ಮಾನ್ಯ ಮುಖ್ಯಮಂತ್ರಿಯವರಿಗೆ ವಿನಂತಿಸಲು ದಿನಾಂಕ: 12-03-2026 ರಂದು ಶೂನ್ಯವೇಳೆಯಲ್ಲಿ ಅವಕಾಶ ಮಾಡಿಕೊಡುವಂತೆ ಕೋರಿದೆ.

**ಉತ್ತರ:-**

ಮಧ್ಯಪ್ರಾಚ್ಯ ದೇಶಗಳಲ್ಲಿ ಯುದ್ಧಭೀತಿ ಉಲ್ಬಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮಧ್ಯಪ್ರಾಚ್ಯ ದೇಶಗಳಾದ ಇರಾನ್ ಮತ್ತು ಇಸ್ರೇಲ್ ನಡುವೆ ಯುದ್ಧ ನಡೆಯುತ್ತಿದ್ದು ನೆರೆಯ ದೇಶಗಳಾದ ಸೌದಿ ಅರೇಬಿಯ, ಯು.ಎ.ಇ, ಕತಾರ್, ಕುವೈತ್, ಬೆಹರಾನ್ ದೇಶಗಳಲ್ಲಿನ ಅಮೇರಿಕಾ ಸೇನಾ ನೆಲೆಗಳು ಸೇರಿದಂತೆ ಇತರೆ ಸ್ಥಳಗಳ ಮೇಲೆ ದಾಳಿ ಮಾಡುತ್ತಿರುವುದರಿಂದ ಅಲ್ಲಿ ನೆಲೆಸಿರುವ ಭಾರತೀಯರು ಹಾಗೂ ಕನ್ನಡಿಗರಿಗೆ ತೊಂದರೆಯಾಗಿದ್ದು, ಸುಮಾರು ಜನರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲಾಗಿದೆ. ಇನ್ನು ಹಲವರು ಯುದ್ಧ ಭೀತಿಯಿಂದ ತಾಯ್ನಾಡಿಗೆ ಮರಳಲು ಮತ್ತು ಅವರ ಸುರಕ್ಷತೆಯ ಬಗ್ಗೆ ಇ-ಮೇಲ್ ಮುಖೇನ ಕೋರಿರುತ್ತಾರೆ. ಈ ಬಗ್ಗೆ ಸರ್ಕಾರವು ಆಯಾ ದೇಶದ ಸಂಬಂಧಿಸಿದ ರಾಯಾಭಾರಿ ಕಚೇರಿಗಳನ್ನು ಹಾಗೂ ಭಾರತ ಸರ್ಕಾರದ ವಿದೇಶಾಂಗ ಸಚಿವಾಲಯವನ್ನು ಸೂಕ್ತ ಕ್ರಮವಹಿಸುವಂತೆ ಕೋರಲಾಗಿರುತ್ತದೆ.

ಅನಿವಾಸಿ ಭಾರತೀಯ ಸಮಿತಿಯನ್ನು ಸಚಿವಾಲಯವನ್ನಾಗಿ ಮಾರ್ಪಡಿಸುವ ಸಂಬಂಧ ಪರಿಶೀಲಿಸಲಾಗಿ, ಸದರಿ ಸಮಿತಿಗೆ ಸಂಬಂಧಿಸಿದ ವಿಷಯವನ್ನು ಬಹುತೇಕ ಭಾರತ ಸರ್ಕಾರದ ವಿದೇಶಾಂಗ ಸಚಿವಾಲಯವೇ ನಿಗಾ ವಹಿಸುವುದರಿಂದ ಇದನ್ನು ಸಚಿವಾಲಯವನ್ನಾಗಿ ಮಾರ್ಪಡಿಸುವ ಅವಶ್ಯಕತೆ ಸದ್ಯಕ್ಕೆ ಇಲ್ಲವೆಂಬ ಅಭಿಪ್ರಾಯಕ್ಕೆ ಸರ್ಕಾರವು ಬಂದಿರುತ್ತದೆ.

**ಸಂಖ್ಯೆ: ಸಿಆಸುಇ (ಆಸು) 39 ಇಆಸು 2026**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ.